ಲ್ಯಾಬ್‌ಟೆಕ್ನೀಷಿಯನ್, ಎಕ್ಸ್‌ರೇ ಟೆಕ್ನಿಷಿಯನ್ ಮತ್ತು ಫಾರ್ಮಸಿ ತರಬೇತಿ ಶಾಲೆಗಳನ್ನು ಮಂಜೂರು ಮಾಡಲಾಗುವುದೇ?

(ಆ) ಸಾಧ್ಯವಾಗದಿದ್ದಲ್ಲಿ ಕಾರಣ ನೀಡುವುದು?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

(ಅ) ಇಲ್ಲ.

(ಆ) ಪ್ರಸ್ತುತ, ಉಡುಪಿ ಜಿಲ್ಲೆಯಲ್ಲಿ ಮೂರು ನರ್ಸಿಂಗ್ ಶಾಲೆಗಳು ಅಸ್ತಿತ್ವದಲ್ಲಿರುತ್ತವೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಬಹುತೇಕ ನರ್ಸಿಂಗ್ ಶಾಲೆಗಳು ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ, ವಿಭಾಗವಾರು ಅಸಮತೋಲನವನ್ನು ಸರಿಪಡಿಸಲು ಸರ್ಕಾರವು 1998ರಲ್ಲಿ 5 ವರ್ಷಗಳ ಅವಧಿಗೆ ಈ ವಿಭಾಗಗಳಲ್ಲಿ ಹೊಸದಾಗಿ ನರ್ಸಿಂಗ್ ಶಾಲೆಯನ್ನು ತೆರೆಯಲು ನಿಷೇಧ ವಿಧಿಸಿದೆ. ಆದ್ದರಿಂದ, ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ನರ್ಸಿಂಗ್ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡಲು ಅವಕಾಶವಿರುವುದಿಲ್ಲ.

ಅಲ್ಲದೆ, ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ವತಿಯಿಂದ ನಡೆಸಲ್ಪಡುತ್ತಿರುವ ಪ್ಯಾರಾ ಮೆಡಿಕಲ್ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶದ ಪ್ರಮಾಣವು ತೀರಾ ಕಡಿಮೆಯಾಗಿದ್ದು, ಬಹಳಷ್ಟು ಸೀಟುಗಳು ಭರ್ತಿಯಾಗದೇ ಉಳಿಯುತ್ತಿವೆ. ಆದ್ದರಿಂದ ಹೊಸದಾಗಿ ಪ್ಯಾರಾ ಮೆಡಿಕಲ್ ಕೋರ್ಸುಗಳನ್ನು ಪ್ರಾರಂಭಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ರಾಜ್ಯದಲ್ಲಿ ಏಡ್ಸ್ ರೋಗದ ನಿಯಂತ್ರಣ.

174(221)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಚ್ಚುತ್ತಿರುವ ''ಏಡ್ಸ್'' ರೋಗದ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ವಿಶೇಷ ಯೋಜನೆಯನ್ನಾದರೂ ರೂಪಿಸಲಾಗಿದೆಯೆ?

ಅ) ರಾಜ್ಯದಲ್ಲಿ ''ಏಡ್ಸ್'' ರೋಗದಿಂದ ಬಳಲುತ್ತಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ''ಏಡ್ಸ್'' ರೋಗದ ಬಗ್ಗೆ ಪ್ರತ್ಯೇಕ ವಿಭಾಗ ಪ್ರಾರಂಭಿಸಲಾಗುವುದೇ?

ಈ) ''ಏಡ್ಸ್'' ರೋಗ ನಿಯಂತ್ರಣಕ್ಕಾಗಿ ಕೇಂದ್ರ ಸರಕಾರದಿಂದ ಹಾಗೂ ಬೇರೆ ರಾಷ್ಟ್ರಗಳಿಂದ ಬಂದ ಅನುದಾನವೆಷ್ಟು? (1999-2000, 2000-2001ನೇ ಸಾಲಿನವರೆವಿಗೂ ವಿವರ ನೀಡುವುದು)

ಉ) ಖರ್ಚು ಮಾಡಿದ ಅನುದಾನವೆಷ್ಟು; ಖರ್ಚು ಮಾಡದೆ ಇರುವ ಹಣವೆಷ್ಟು?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಏಡ್ಸ್ ರೋಗವನ್ನು ನಿಯಂತ್ರಿಸಲು, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿಯನ್ನು ಸ್ಥಾಪಿಸಲಾಗಿದೆ.

ಆ) 1987 ರಿಂದ 2000ನೇ ಡಿಸೆಂಬರ್ ಅಂತ್ಯದವರೆಗೆ ಒಟ್ಟು 813 ಮಂದಿ. (ಜಿಲ್ಲಾವಾರು ವಿವರಗಳನ್ನು ಅನುಬಂಧ - Iರಲ್ಲಿ ಲಗತ್ತಿಸಿದೆ.)

ಇ) ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏಡ್ಸ್ ನಿಯಂತ್ರಣದ ಬಗ್ಗೆ ಸ್ವಯಂ ಪ್ರೇರಿತ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಕೇಂದ್ರ ಸರ್ಕಾರದಿಂದ (ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ NACO ಮೂಲಕ) ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಗಿನಂತಿವೆ.

ವರ್ಷ	ಬಂದ ಅನುದಾನ ರೂ.ಲಕ್ಷಗಳಲ್ಲಿ
1999-2000 (1998-99ರಲ್ಲಿ ಖರ್ಚು ಮಾಡದೆ ಉಳಿದ ಅನುದಾನ ರೂ. 134.269 ಲಕ್ಷಗಳು ಸೇರಿ)	937.56
2000-2001 (1999/2000ದಲ್ಲಿ ಖರ್ಚು ಮಾಡದೆ ಉಳಿದ ಅನುದಾನ ರೂ. 380.62 ಲಕ್ಷಗಳು ಸೇರಿ)	583.62

	99-2000	2000-2001 (ದಿ: 31-1-2001 ರವರೆಗೆ)
ಖರ್ಚು ಮಾಡಿದ ಅನುದಾನ :	556.94	462.66
ಖರ್ಚು ಮಾಡದೆ ಇರುವ ಅನುದಾನ:	380.62	120.96

ಅನುಬಂಧ - 1

1987ರಿಂದ 2000ನೇ ವರ್ಷದ ಡಿಸೆಂಬರ್ ತಿಂಗಳ ಅಂತ್ಯದವರೆವಿಗೆ ಏಡ್ಸ್ ರೋಗದಿಂದ ಬಳಲುತ್ತಿರುವವ ಜಿಲ್ಲಾವಾರು ಸಂಖ್ಯೆ.

ಕ್ರಮ ಸಂಖ್ಯೆ	ವಿಭಾಗ : ಜಿಲ್ಲೆಗಳು	ಏಡ್ಸ್ ರೋಗದಿಂದ ಬಳಲುತ್ತಿರುವವರು
ಬೆಂಗಳೂರು ವಿಭಾಗ		
1	ಬೆಂಗಳೂರು ನಗರ	129
2	ಬೆಂಗಳೂರು ಗ್ರಾಮಾಂತರ	9
3	ತುಮಕೂರು	14
4	ಶಿವಮೊಗ್ಗ	36
5	ಚಿತ್ರದುರ್ಗ	9
6	ದಾವಣಗೆರೆ	8
7	ಕೋಲಾರ	13
ಮೈಸೂರು ವಿಭಾಗ		
8	ಮೈಸೂರು	10
9	ಚಾಮರಾಜನಗರ	1
10	ಮಂಡ್ಯ	19
11	ಮಂಗಳೂರು	16
12	ಉಡುಪಿ	134
13	ಮಡಿಕೇರಿ	2
14	ಚಿಕ್ಕಮಗಳೂರು	15

15	ಹಾಸನ	9
ಬೆಳಗಾಂ ವಿಭಾಗ		
16	ಬೆಳಗಾಂ	13
17	ಬಿಜಾಪುರ	1
18	ಬಾಗಲಕೋಟೆ	6
19	ಧಾರವಾಡ	175
20	ಹಾವೇರಿ	19
21	ಗದಗ್	17
22	ಕಾರವಾರ	42
ಗುಲ್ಬರ್ಗಾ ವಿಭಾಗ		
23	ಗುಲ್ಬರ್ಗಾ	6
24	ರಾಯಚೂರು	14
25	ಬೀದರ್	2
26	ಬಳ್ಳಾರಿ	24
27	ಕೊಪ್ಪಳ	5
	ಒಟ್ಟು	748
	ಹೊರ ರಾಜ್ಯದವರು	61
	ವಿದೇಶಿಯರು	4
	ಒಟ್ಟು	813